ಶ್ರೀ ಮುಲ್ಕ ಗೋವಿಂದರೆಡ್ಡಿ.—(ಚಿತ್ರದುರ್ಗ) ಜಿಲ್ಲೆಯಲ್ಲಿ ಇದೇ ಎಂ. ಎ. ವಿ. ಹತ್ತಿಯನ್ನು ಬೆಳೆಯುತ್ತಿರುವುದು ತಮಗೆ ಗೊತ್ತಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಎಂ. ಎ. ವಿ. ಜಾತಿ ಹತ್ತಿಯನ್ನು ಬೆಳೆಯುವುದಕ್ಕೆ ಪ್ರಾರಂಭವಾಡಿರುವುದು ನಮ್ಮ ಸರ್ಕಾರದವರ 29-10-51ನೆಯ ತಾರೀಖಿನ ಇಸ್ತಿಹಾರ್ ಪ್ರಕಾರ. ಅದರಪ್ರಕಾರ ಈಗಲೂ ನಡೆಯುತ್ತಿದೆ. ಚಿತ್ರದುರ್ಗ ಜಿಲ್ಲೆಯಲ್ಲಿರುವುದು ಯಾವುದೂ ನಮಗೆ ಕಂಡುಬಂದಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಚಿತ್ರದುರ್ಗ ಜಿಲ್ಲೆಯಲ್ಲಿ ಅನೇಕ ವರ್ಷಗಳಿಂದ ಈ ಎಂ. ಎ. ವಿ. ಹತ್ತಿ ಬೆಳೆಯುತ್ತಿರುವುದು ತಮಗೆ ಗೊತ್ತಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅಫಿಷಿಯಲ್ಲಾಗಿ recognise ಆಗಿರುವ ಬೀಜ, ಹಾಗೂ ಇಲಾಖೆಯವರು ಶಿಫಾರಸು ಮಾಡಿರುವ ಬೀಜವನ್ನು ಪಯೋಗಿಸಿ ಅಲ್ಲಿ ಎಂ. ಎ. ವಿ. ಹತ್ತಿಯನ್ನು ಬೆಳೆದಿರುವುದು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ನಿಮ್ಮ ವ್ಯವಸಾಯದ ಇಲಾಖೆಯವರೇ ಕೊಟ್ಟ ಎಂ. ಎ. ವಿ. ಜಾತಿಯ ಬೀಜದಿಂದ ಅಲ್ಲಿ ಬೆಳೆಯುತ್ತಿದ್ದಾರೆಂಬುದು ತಮಗೆ ಗೊತ್ತಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ —ಅದು ನನಗೆ ಗೊತ್ತಿಲ್ಲ. But there is a Government Order as I have already brought it to your notice.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅಲ್ಲಿ ಈ ಹತ್ತಿ ಬೆಳೆಯುವುದಕ್ಕೆ ಬಹಳ ಅವಕಾಶವಿದೆ. ಈ ಅಂಶವನ್ನು ಗಮನಿಸಿ ಅಲ್ಲಿ ಈ ಬೀಜವನ್ನು ತಯಾರುಮಾಡಲಿಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

Sri H. SIDDAVEERAPPA.—I will examine it, but so far the result of the examination is that the soil and the climate in Chitaldrug District are not congenial. That is what they say—I am guided by experts' opinion so far as this technical matter is concerned. I will get it further examined.

ಶ್ರೀ ಮುಲ್ಕ ಗೋವಿಂದರೆಡ್ಡಿ.—ನಾವು ಅದಕ್ಕಿಂತಲೂ ಜಾಸ್ತಿಯಾಗಿ ಮತ್ತು ಚೆನ್ನಾಗಿ ಬೆಳೆಯುತ್ತಿದ್ದೇವೆ. ಅದಕ್ಕೋಸ್ಕರವೇ ನಾನು ಹೇಳುತ್ತಿರುವುದು.

Two types of Ration Cards 'A' and 'B'.

Q.—503. **Sri V. R. NAIDU.**—Malleswaram).—Will the Government be pleased to state :—

(*a*) whether they have examined the advantages or disadvantages resulting from the issue of two types of ration cards 'A' and 'B';

(*b*) whether as a result thereof they intend issuing only one kind of ration card hereafter ?

A.—**Sri H. SIDDAVEERAPPA** (Minister for Home and Industries).—

(*a*) The classification into 'A' and 'B' (now 'R' and 'M') was according to the dietary habits of individual families and hence no question of advantage or disadvantage arises.

(*b*) No.

ಶ್ರೀ ವಿ. ಆರ್. ನಾಯ್ಡು.—'A' ಮತ್ತು 'B' ಎಂದು ಎರಡು ತರಗತಿಗಳಾಗಿ ಜನರನ್ನು ವಿಂಗಡಿಸಿರುವುದು ನಮ್ಮ ದೇಶದಲ್ಲಿ ಮಾತ್ರವೇ, ಅಥವಾ ಇನ್ನಾವ ದೇಶದಲ್ಲಾದರೂ ಇದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಬೇರೆ ಕಡೆ ಆ ರೀತಿ ಇರುವುದು ನನಗೆ ಗೊತ್ತಿಲ್ಲ.

ಶ್ರೀ ವಿ. ಆರ್. ನಾಯ್ಡು.—ತಾವಿಲ್ಲಿ 'ಎ' ಮತ್ತು 'ಬಿ' ತರಗತಿಗಳನ್ನು ಈಚೆಗೆ 'ಆರ್.' ಮತ್ತು 'ಎಂ.' ಎಂಬುದಾಗಿ ವಿಂಗಡಿಸಿರುವುದಾಗಿ ಹೇಳಿದ್ದೀರಿ. ಆರ್. ಮತ್ತು ಎಂ. ಎಂಬುದರ ಅರ್ಥವೇನು ?

ಶ್ರೀ ಎಚ್ ಸಿದ್ದವೀರಪ್ಪ.—ಮೊದಲು 'ಎ' ಮತ್ತು 'ಬಿ' ಎಂಬುದಾಗಿ ಕರೆಯುತ್ತಿರುವವರನ್ನೇ ಈಗ 'ಆರ್.' ಎಂದರೆ ಅಕ್ಕಿ ತಿನ್ನುವವರೆಂತಲೂ, 'ಎಂ.' ಎಂದರೆ ಮಿಲೆಟ್ಸ್ ತಿನ್ನುವವರೆಂತಲೂ ಮಾಡಿದ್ದೇವೆ.

ಶ್ರೀ ವಿ. ಆರ್. ನಾಯ್ಡು.—ನಿನ್ನೆ ಹಬ್ಬದ ದಿವಸ ಮಿಲೆಟ್ಸ್ ತೆಗೆದುಕೊಳ್ಳುವವರಿಗೆ ಯಾರಿಗೂ ರಾಗಿ ಸಿಕ್ಕದೆ ಸಾವಿರಾರು ಜನ ಕಾರ್ಮಿಕರಿಗೆ ಕಣ್ಣಲ್ಲಿ ರಕ್ತ ಸುರಿಯುತ್ತಿತ್ತು. ಅವರಿಗೆ ಅಕ್ಕಿಯನ್ನೋ ಅಥವಾ ಬೇರೆ ದವಸವನ್ನೋ ಕೊಟ್ಟು ಏನಾದರೂ ಪರಿಹಾರ ಮಾಡಿದಿರಾ ?

ಶ್ರೀ ಎಚ್. ಸಿದ್ದವೀರಪ್ಪ.—ಈಗಲೇ ತಮ್ಮ ಬಾಯಿಂದ ಹೊಸದಾಗಿ ಕೇಳುತ್ತಿರುವುದು, ಆಹಾರ ಧಾನ್ಯ ಜನರಿಗೆ ಸಿಕ್ಕಲಿಲ್ಲ ಎಂದು ! ಇವೊತ್ತೇ ನೀವು ಹೇಳಿದ್ದು ! ಇಷ್ಟುಮಟ್ಟಿಗೆ ನಾನು ಹೇಳಬಲ್ಲೆ, ನಮಗಂತೂ ಇದುವರೆಗೂ ಆಹಾರಧಾನ್ಯ ಸಿಕ್ಕಲಿಲ್ಲವೆಂದು ಯಾವ ಕಡೆಯಿಂದಲೂ ದೂರು ಬಂದಿಲ್ಲ.

ಶ್ರೀ ವಿ. ಆರ್. ನಾಯ್ಡು.—ಮೊನ್ನೆ ಹಬ್ಬದ ದಿವಸ ಅನೇಕರಿಗೆ ರಾಗಿ ಸಿಕ್ಕಲಿಲ್ಲ ಇಲ್ಲಿ ನೀವು ಹೇಳಿದ್ದೀರಿ, ಆಯಾ ಕುಟುಂಬದವರ ಅಭ್ಯಾಸಗಳಿಗನುಗುಣವಾಗಿ R ಮತ್ತು M ಎಂದು ಮಾಡಿದ್ದೇವೆ ಎಂದು. ಕುಟುಂಬಗಳವರಿಗೆ ಅನಾನುಕೂಲವೆಂದು ಹೇಳಿದರೆ ಮಿಲೆಟ್ಸ್‌ಗೆ ಬದಲಾಗಿ ಅಕ್ಕಿ ಕೊಡುವ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಯೋಚನೆ ಮಾಡೋಣ. It all depends upon the dietary habits of the people.

Sri M. PALANIYAPPAN.—How do you distinguish between rice eaters and millet eaters?

Sri H. SIDDAVEERAPPA.—From custom and habit of the people.

Sri M. PALANIYAPPAN.—Is it no against fundamental rights?

(No answer.)